ಓ.ಎಸ್. ನಂಃ 07/2020
ಡಿ.ಡಬ್ಲ್ಯೂ-2 (ಶಮಶಾದಬೇಗಂ)

ದಿನಾಂಕ: 17-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎನ್.ಎಸ್.ಜಿ. ಪ್ರತಿವಾದಿ ಪರ ವಕೀಲರಿಂದಃ**

ನಾನು 7ನೇ ತರಗತಿವರೆಗು ಓದಿದ್ದೇನೆ. ಈ ದಾವೆಯನ್ನು ಖಲೀಲಅಹ್ಮದ ಹೂಡಿರುತ್ತಾರೆ. ಖಲೀಲಅಹ್ಮದ ಇವರ ತಾಯಿಯ ಹೆಸರು ತಾರಮ್ಮಾ. ವಾದಿ 1972 ರಲ್ಲಿ ಹುಟ್ಟಿರುತ್ತಾರೆ ಎಂದರೆ ಸರಿ. ವಾದಿ 05 ವರ್ಷದವರಿದ್ದಾಗ ಅವರ ತಾಯಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ತಾಯಿ ತೀರಿಕೊಂಡಾಗ ವಾದಿಗೆ 03 ವರ್ಷ ವಯಸ್ಸು ಇತ್ತು. ನನ್ನ ಯಜಮಾನರ ಹೆಸರು ಮೈನುದ್ದೀನ. ಮೈನುದ್ದೀನ ಇವರ ತಂದೆಯ ಹೆಸರು ಬುರಾನುದ್ದೀನ ಹಾಗೂ ತಾಯಿಯ ಹೆಸರು ಗುಡುಮಾ ಎಂದು ಇರುತ್ತದೆ. ಮೈನುದ್ದೀನ ಇವರ ಅಣ್ಣನ ಹೆಸರು ಮೀರಾಸಾಬ.

2. ವಾದಿ 03 ವರ್ಷದವರಿದ್ದಾಗ ಅವರ ತಾಯಿ ತೀರಿಕೊಂಡ ನಂತರ ವಾದಿಯ ಸಂರಕ್ಷಣೆಯನ್ನು ಗುಡುಮಾಬಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿದಾರರು ತಾವೇ ವಾದಿಯ ಸಂರಕ್ಷಣೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಮತ್ತು ಮೈನುದ್ದೀನ ಇವರ ಮದುವೆ 1980ರಲ್ಲಿ ಆಗಿದೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ನಾನು ಹೇಳುತ್ತಿರುವ ಸಾಕ್ಷಿ ಪ್ರಕಾರ ವಾದಿಯ ತಾಯಿ 1975ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ತಾಯಿ ತೀರಿಕೊಂಡಾಗ ನನ್ನ ಮತ್ತು ಮೈನುದ್ದೀನ ಇವರ ಮದುವೆ ಅಗಿರಲಿಲ್ಲ ಹಾಗೂ ನಾನು ವಾದಿಯನ್ನು ಯಾವತ್ತೂ

ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ. ವಾದಿಯನ್ನು ಗುಡುಮಾಬಿ ಇವರು ನೋಡಿಕೊಂಡಿದ್ದರೂ ಸಹ ನೋಡಿಕೊಂಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಈ ದಾವೆಗೆ ಲಿಖಿತ ಹೇಳಿಕೆ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಲಿಖಿತ ಹೇಳಿಕೆಗೆ ಮಾಹಿತಿಯನ್ನು ಕೊಡುವಾಗ ಮೈನುದ್ದೀನ ಇವರು ಹಜ್ಜನಲ್ಲಿ ಮೃತಪಟ್ಟ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿ. ಅದೇ ರೀತಿ ನನ್ನ ಮಕ್ಕಳಿಗು ಸಹ ಗೊತ್ತಿತ್ತು ಎಂದರೆ ಸರಿ. ವಾದಿ ತಮ್ಮ ವಾದ ಪತ್ರದಲ್ಲಿ ತಮ್ಮ ತಂದೆ ಹಜ್ಜಗೆ ಹೋದಾಗ ಅಲ್ಲಿ ಮೃತಪಟ್ಟಿದ್ದಾರೆ ಎಂದು ಬರೆಯಿಸಿದ್ದಾರೆ ಎಂದರೆ ಸರಿ.

4. ನಾನು ಈ ದಾವೆಯಲ್ಲಿ ಸಾಕ್ಷಿ ನುಡಿಯುವುದಕ್ಕಿಂತ ಮೊದಲು ನನ್ನ ಮಗ 4ನೇ ಪ್ರತಿವಾದಿ ಈ ದಾವೆಯಲ್ಲಿ ಸಾಕ್ಷಿ ಕೊಟ್ಟಿದ್ದಾರೆ ಎಂದರೆ ಸರಿ. ಅದೇ ರೀತಿ 4ನೇ ಪ್ರತಿವಾದಿ ತಮ್ಮ ಸಾಕ್ಷಿಯಲ್ಲಿ ತಾವು ಸಾಕ್ಷಿಯನ್ನು ತಮ್ಮ ಪರವಾಗಿ, ನನ್ನ ಪರವಾಗಿ ಹಾಗೂ ಪ್ರತಿವಾದಿ 3, 5 ಮತ್ತು 6 ರವರ ಪರವಾಗಿ ಸಾಕ್ಷಿ ನುಡಿಯುತ್ತಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿ.

5. ನಮ್ಮ ಲಿಖಿತ ಹೇಳಿಕೆ ಮತ್ತು 4ನೇ ಪ್ರತಿವಾದಿಯ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮೈನುದ್ದೀನ ಜಮಖಂಡಿ ಇವರು ಗೋಕಾಕನಲ್ಲಿ ಮೃತಪಟ್ಟಿರುತ್ತಾರೆಂದು ಬರೆಯಿಸಿದ್ದೇವೆ ಎಂದರೆ ಸರಿಯಲ್ಲ. ಮೈನುದ್ದೀನ ಇವರ

ಮರಣ ಪ್ರಮಾಣ ಪತ್ರ ನನ್ನ ಬಳಿ ಇದೆ ಎಂದರೆ ಸರಿ. ಅದನ್ನು ನಮ್ಮ ವಕೀಲರಿಗೆ ಕೇಳಿ ನಾನು ಹಾಜರಪಡಿಸುತ್ತೇನೆ. ಸದರಿ ಮರಣ ಪ್ರಮಾಣ ಪತ್ರ ಹಾಜರ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಮೈನುದ್ದೀನ ಇವರು ಹಜ್ಜನಲ್ಲಿ ತೀರಿಕೊಂಡಿದ್ದಾರೆಂದು ಗೊತ್ತಿದ್ದರೂ ಸಹ ಲಿಖಿತ ಹೇಳಿಕೆಯಲ್ಲಿ ಹಾಗೂ 4ನೇ ಪ್ರತಿವಾದಿಯ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮೈನುದ್ದೀನ ಇವರು ಗೋಕಾಕನಲ್ಲಿ ಮೃತಪಟ್ಟಿರುತ್ತಾರೆ ಎಂದು ಸುಳ್ಳು ಮಾಹಿತಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

6. ನನಗು, ನನ್ನ ಮಕ್ಕಳಿಗು ಹಾಗೂ ವಾದಿಗು ಮೊದಲಿನಿಂದಲು ಸಂಬಂಧ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ನನ್ನ ಮಕ್ಕಳ ಉದ್ದೇಶ ವಾದಿಗೆ ತೊಂದರೆ ಕೊಡುವುದು ಹಾಗೂ ನಷ್ಠ ಉಂಟು ಮಾಡುವುದು ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಹಾಗೂ ನನ್ನ ಮಕ್ಕಳು ಸೇರಿ ನಿಜ ಸಂಗತಿಗಳನ್ನು ಬಚ್ಚಿಟ್ಟು ಸುಳ್ಳು ಮಾಹಿತಿಗಳನ್ನು ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

7. ಈಗಾಗಲೇ ನನ್ನ ಮಗ 4ನೇ ಪ್ರತಿವಾದಿ ಈ ದಾವೆಯಲ್ಲಿ ನನ್ನ ಪರವಾಗಿ ಸಾಕ್ಷಿ ನುಡಿದಿದ್ದರಿಂದ ನನಗೆ ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿಯ ಸಾಕ್ಷಿಯಲ್ಲಿರುವ ನ್ಯೂನ್ಯತೆಯನ್ನು ಸರಿಪಡಿಸಲು ಸುಳ್ಳು ಸಂಗತಿಗಳನ್ನು ಹೇಳಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ಮೈನುದ್ದೀನ ಇವರ ತಂದೆ ಬುರಾನಸಾಬ ಹಾಗೂ ಅವರ ಮೂರು ಜನ ಸಹೋದರರಿಗೆ ಬೆಲ್ಲದಬಾಗೇವಾಡಿಯಲ್ಲಿ 04ಎಕರೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಬಾಂವಿ ಇದೆ ಆ ಬಾಂವಿಯಿಂದ ನೀರಾವರಿ ಮಾಡಿರುತ್ತಾರೆ ಎಂದರೆ ಸರಿ. ಮೈನುದ್ದೀನ ಇವರ ತಂದೆ ತೀರಿಕೊಂಡ ನಂತರ ಸದರಿ ಜಮೀನಿನ ಉತಾರದಲ್ಲಿ ಮೈನುದ್ದೀನ ಹಾಗೂ ಅವರ ಸಹೋದರ ಮೀರಾಸಾಬ ಇವರ ಹೆಸರು ದಾಖಲಾಗಿದೆ ಎಂದರೆ ಸರಿ. ಸದರಿ ಜಮೀನು ನೀರವರಿ ಜಮೀನಿನಾಗಿದ್ದರಿಂದ ಮೈನುದ್ದೀನ ಹಾಗೂ ಅವರ ಸಹೋದರ ಮೀರಾಸಾಬ ಇವರಿಗೆ ಸಾಕಷ್ಟು ಆದಾಯ ಬರುತ್ತಿತ್ತು ಎಂದರೆ ಸರಿಯಲ್ಲ.

9. ಮೈನುದ್ದೀನ ಇವರು 1972ರಲ್ಲಿ ಸರಕಾರಿ ಉರ್ದು ಶಾಲಯಲ್ಲಿ ಶಿಕ್ಷಕರಾಗಿ ನೇಮಕಗೊಂಡಿದ್ದಾರೆ ಎಂದರೆ ಶಿಕ್ಷಕರು ಇದ್ದರು ಆದರೆ 1972ರಲ್ಲಿ ನೇಮಕಗೊಂಡಿರುವುದಿಲ್ಲ ಎಂದು ಹೇಳುತ್ತಾರೆ. ಆದರೆ ತಮಗೆ ಯಾವ ವರ್ಷದಲ್ಲಿ ನೇಮಕಗೊಂಡಿದ್ದಾರೆ ಎಂದು ನೆನಪಿಲ್ಲ ಎಂದು ಹೇಳುತ್ತಾರೆ. ಮೈನುದ್ದೀನ ಇವರು 1972ರಲ್ಲಿ ಶಿಕ್ಷಕರಾಗಿ ನೇಮಕ ಹೊಂದಿಲ್ಲ ಎಂದು ತೋರಿಸಲು ಮೈನುದ್ದೀನ ಇವರು ನೇಮಕಾತಿ ಆದೇಶವನ್ನು ಹಾಜರಪಡಿಸುತ್ತೇನೆ.

10. ಮೈನುದ್ದೀನ ಇವರು ಉರ್ದು ಶಿಕ್ಷಕರಾಗಿಯೇ ನಿವೃತ್ತಿ ಹೊಂದಿದ್ದಾರೆ ಎಂದರೆ ಸರಿ. ಮೈನುದ್ದೀನ ಇವರು 2015 ರಲ್ಲಿ ಹಜ್ಜನಲ್ಲಿ ತೀರಿಕೊಂಡ ನಂತರ ಅವರ ಕುಟುಂಬ ಪಿಂಚಣಿಯನ್ನು ನಾನು ಪಡೆಯುತ್ತಿದ್ದೇನೆ ಎಂದರೆ ಸರಿ.

ಮೈನುದ್ದೀನ ಇವರ ಕುಟುಂಬದ ಪಿಂಚಣಿ ಪಡೆಯುವ ಸಲುವಾಗಿ ನಾನು ಟ್ರೇಜರಿ ಕಚೇರಿಯಲ್ಲಿ ಮತ್ತು ಬ್ಯಾಂಕನಲ್ಲಿ ಮೈನುದ್ದೀನ ಇವರ ಮರಣ ಪ್ರಮಾಣ ಪತ್ರ ಹಾಜರ ಮಾಡಿದ್ದೆ ಎಂದರೆ ಸರಿ. ಮೈನುದ್ದೀನ ಇವರ ಮರಣ ಪ್ರಮಾಣ ಪತ್ರವನ್ನು ನಾನು ಸೌದಿ ಅರೆಬಿಯಾದಿಂದ ಪಡೆದಿದ್ದೆ.

11. ಮೈನುದ್ದೀನ ಹಾಗೂ ಅವರ ಸಹೋದರರಿಗೆ ಜಮೀನಿನಿಂದ ಆದಾಯ ಬರುತ್ತಿತ್ತು ಹಾಗೂ ಮೈನುದ್ದೀನ ಇವರು ಕೆಲಸ ಮಾಡುತ್ತಿದ್ದುದ್ದರಿಂದ ಅವರಿಗೆ ಸರಕಾರಿ ಸಂಬಳ ಬರುತಿತ್ತು ಎಂದರೆ ಸರಿಯಲ್ಲ. ಯಾವತ್ತೂ ಮೈನುದ್ದೀನ ಇವರಿಗೆ ಹಣಕಾಸಿನ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ.

12. ಮೈನುದ್ದೀನ ಹಾಗೂ ಸಹೋದರರಿಗೆ ಹಣಕಾಸಿನ ಯಾವುದೇ ತೊಂದರೆ ಇರದೇ ಇದ್ದುದ್ದರಿಂದ ಅವರುಗಳು ದಿಃ26/10/1967 ರಂದು ಸಿ.ಟಿ.ಎಸ್.ನಂ.1682 ರಲ್ಲಿಯ 12.3ಮೀ X 8.9ಮೀ ವಿಸ್ತೀರ್ಣದ ಮನೆ ಖರೀದಿ ಮಾಡಿದ್ದರು ಎಂದರೆ ಸರಿ. ಸದರಿ ಆಸ್ತಿಗೆ ಮೈನುದ್ದೀನ ಹಾಗೂ ಅವರ ಸಹೋದರರ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ.

13. ಮೈನುದ್ದೀನ ಹಾಗೂ ಸಹೋದರರಿಗೆ ಸಾಕಷ್ಟು ಆದಾಯ ಇದ್ದುದ್ದರಿಂದ ದಿಃ 10/01/1984 ರಂದು ಸಿ.ಟಿ.ಎಸ್.ನಂ.1681 ರ 3/4 ಹಿಸ್ಸೆಯನ್ನು ಗುಡುಮಾಬಿ ಕೋಂ ಅಬ್ದುಲಸಾಬ ಜಮಖಂಡಿ, ಅಲ್ಲಾವುದ್ದೀನ ಜಮಖಂಡಿ, ಮೌಲಾಅಲಿ ಜಮಖಂಡಿ, ನಿಯಾಜ ಜಮಖಂಡಿ, ಬಿಬಿಜಾನ

ಮತ್ತು ಇಸ್ಮಾಯಿಲ ಜಮಖಂಡಿ ಇವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಸಿ.ಟಿ.ಎಸ್.ನಂ.1681ಕ್ಕೆ ಮೈನುದ್ದೀನ ಹಾಗೂ ಅವರ ಸಹೋದರರ ಹೆಸರು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

14. ನನ್ನ ಮಗ ಯಾವ ಯಾವ ದಾಖಲೆ ಹಾಜರ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಸಿ.ಟಿ.ಎಸ್.ನಂ.1681 ರ ಉತಾರವನ್ನು ನಿಡಿ-2 ರ ಪ್ರಕಾರ ಹಾಜರ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-2ರಲ್ಲಿ ದಿಃ10/01/1984 ರಂದು ಮೈನುದ್ದೀನ ಮತ್ತು ಮೀರಾಸಾಬ ಕೂಡಿ ಸದರಿ ಆಸ್ತಿ ಖರೀದಿ ಮಾಡಿದ್ದಾರೆ ಎಂದು ಬರೆಯಲಾಗಿದೆ ಎಂದರೆ ಸರಿ.

15. ಮೈನುದ್ದೀನ ಹಾಗೂ ಅವರ ಸಹೋದರರಿಗೆ ಹಣಕಾಸಿನ ಅಡಚಣೆ ಇರದೇ ಇದ್ದುದ್ದರಿಂದ ಅವರು ಆಸ್ತಿಗಳನ್ನು ಖರೀದಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಮೈನುದ್ದೀನ ಇವರು ತಮ್ಮ ಮನೆ ಖರ್ಚುಗಳನ್ನು ತಾವೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ, ನಾನು ಸಹ ಅವರಿಗೆ ಸಹಾಯ ಮಾಡುತ್ತಿದ್ದೆ. ನಮ್ಮ ದಾವೆಗೆ ಅನುಕೂಲ ಆಗಲಿ ಎಂದ ನಾನು ಸಹ ಮೈನುದ್ದೀನ ಇವರಿಗೆ ಸಹಾಯ ಮಾಡುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

16. ನಾನು ಮೈನುದ್ದೀನ ಇವರಿಗೆ 2ನೇ ಹೆಂಡತಿ ಎಂದರೆ ಸರಿ. ನನಗೆ ಮತ್ತು ಮೈನುದ್ದೀನ ಇವರಿಗೆ ಒಟ್ಟು 05 ಜನ ಮಕ್ಕಳು. ಅವರಲ್ಲಿ ಬಿಬಿಆಸ್ಮಾ

ಅಂದರೆ 2ನೇ ಪ್ರತಿವಾದಿ ದೊಡ್ಡವರು. 2ನೇ ಪ್ರತಿವಾದಿ 1981 ರಲ್ಲಿ ಹುಟ್ಟಿರುತ್ತಾರೆ. 3ನೇ ಪ್ರತಿವಾದಿ 1983 ರಲ್ಲಿ ಹುಟ್ಟಿರುತ್ತಾರೆ. 4ನೇ ಪ್ರತಿವಾದಿ 1985ರಲ್ಲಿ ಹುಟ್ಟಿರುತ್ತಾರೆ. 5ನೇ ಪ್ರತಿವಾದಿ 1987 ರಲ್ಲಿ ಹುಟ್ಟಿರುತ್ತಾರೆ. 6ನೇ ಪ್ರತಿವಾದಿ 1989 ರಲ್ಲಿ ಹುಟ್ಟಿರುತ್ತಾರೆ. ನಾನು ನನ್ನ ಮಕ್ಕಳನ್ನು ಜೋಪಾನ ಮಾಡಿಕೊಂಡು ಮನೆಯಲ್ಲಿಯೆ ಇರುತ್ತಿದ್ದೆ ಎಂದರೆ ಸರಿಯಲ್ಲ, ನಾನು ಬಳೆ ವ್ಯಾಪಾರ ಸಹ ಮಾಡುತ್ತಿದ್ದೆ. ನಾನು ಬಳೆ ವ್ಯಾಪಾರ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ.

17. ನಾನು ಮೈನುದ್ದೀನ ಇವರ ಜೊತೆ ಮದುವೆ ಮಾಡಿಕೊಂಡ ನಂತರ ವಾದಿಯನ್ನು ಯಾವತ್ತು ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ. ಮೈನುದ್ದೀನ ಇವರು ನನ್ನ ಮಾತು ಕೇಳಿ ವಾದಿಯನ್ನು ಮೊದಲಿನಿಂದಲು ನಿರ್ಲಕ್ಷ ಮಾಡಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ವಾದಿಯ ತಾಯಿಯ ಮರಣಾ ನಂತರ ವಾದಿಯನ್ನು ಮೈನುದ್ದೀನ ಇವರ ತಾಯಿ ಗುಡುಮಾಬಿ ಇವರು ಜೋಪಾನ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಗುಡುಮಾಬಿ ಇವರು 2001ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ.

18. ಮೈನುದ್ದೀನ ಇವರು ತಮ್ಮ ಹೆಸರಿನಲ್ಲಿ ಆಸ್ತಿ ಖರೀದಿ ಮಾಡುತ್ತಿದ್ದುದ್ದರಿಂದ ನನ್ನ ಜೀವನದ ಭದ್ರತೆಗಾಗಿ ನನ್ನ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಬೇಕೆಂದು ಮೈನುದ್ದೀನ ಇವರಿಗೆ ನಾನು ಹೇಳಿದ್ದೆ ಎಂದರೆ ಸರಿಯಲ್ಲ. ನಾನು ಈ ರೀತಿ ಹೇಳಿದ್ದರಿಂದ ಮೈನುದ್ದೀನ ಇವರು 1985ರಲ್ಲಿ ಸಿ.ಟಿ.ಎಸ್.

ನಂ.2138ನ್ನು ನನ್ನ ಹೆಸರಿನಲ್ಲಿ ತಮ್ಮ ನೌಕರಿ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ.

19. ನನಗೆ ವೈಯಕ್ತಿಕವಾಗಿ ಯಾವುದೇ ಸ್ವತಂತ್ರ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. 1985 ಕಿಂತ ಪೂರ್ವದಲ್ಲಿ ನನಗೆ ವೈಯಕ್ತಿಕವಾಗಿ ಆದಾಯ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ನನಗೆ ವೈಯಕ್ತಿಕವಾಗಿ ಆದಾಯ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರ ಮಾಡಿಲ್ಲ ಎಂದರೆ ಸರಿ. ನಾನು ಯಾವತ್ತೂ ಬಳೆಯ ವ್ಯಾಪಾರ ಮಾಡದೇ ಇದ್ದರೂ ಸಹ ಬಳೆಯ ವ್ಯಾಪಾರ ಮಾಡುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಳೆಯ ವ್ಯಾಪಾರ ಮಾಡುತ್ತಿದ್ದೆ ಎಂದು ತೋರಿಸಲು ನನ್ನ ಬಳಿ ಮುನಿಸಿಪಾಲಿಟಿಯಿಂದ ಕೊಟ್ಟ ಲೈಸನ್ಸ ಇರುವುದಿಲ್ಲ ಎಂದರೆ ಸರಿ. ನಾನು ಬಳೆ ಖರೀದಿ ಮಾಡುತ್ತಿದ್ದ ಬಗ್ಗೆ ಯಾವುದೇ ರಸೀದಿ ಇರುವುದಿಲ್ಲ ಎಂದರೆ ಸರಿ. ನಾನು ಯಾವತ್ತೂ ಬಳೆ ವ್ಯಾಪಾರ ಮಾಡದೇ ಇದ್ದುದ್ದರಿಂದ ನನ್ನ ಬಳಿ ರಸೀದಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವ್ಯಾಪಾರ ಮಾಡದೇ ಇದ್ದರೂ ಸಹ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗ ವ್ಯಾಪಾರ ಎಂದು ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ.

20. ಮೈನುದ್ದೀನ ಇವರು ನನ್ನ ಹೆಸರಿನಲ್ಲಿ ಖರೀದಿ ಮಾಡಿದ ಆಸ್ತಿಯ ಖರೀದಿ ಪತ್ರ 4ನೇ ಪ್ರತಿವಾದಿ ಈ ದಾವೆಯಲ್ಲಿ ಹಾಜರ ಮಾಡಿದ್ದಾರೆ ಎಂದರೆ

ಸರಿ. ಸದರಿ ಆಸ್ತಿ ಖರೀದಿ ಮಾಡುವಾಗ ನಾನು ಏನು ಕೆಲಸ ಮಾಡುತ್ತಿದ್ದೆ ಅದನ್ನು ಸದರಿ ಖರೀದಿ ಪತ್ರದಲ್ಲಿ ಬರೆಯಲಾಗಿದೆ ಎಂದರೆ ಸರಿ. ಸಿ.ಟಿ.ಎಸ್.ನಂ.2138 ನನ್ನ ಸ್ವಯಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಸಿ.ಟಿ.ಎಸ್.ನಂ.2138 ರಲ್ಲಿ ವಾದಿಗೂ ಸಹ ಪಾಲು ಬಂದಿದೆ ಎಂದರೆ ಸರಿಯಲ್ಲ. ಸಿ.ಟಿ.ಎಸ್.ನಂ.2138 ರಲ್ಲಿ ವಾದಿಗೆ ಪಾಲು ಕೊಡುವುದನ್ನು ತಪ್ಪಿಸಲು ಸದರಿ ಆಸ್ತಿ ನಾನು ನನ್ನ ಬಳೆ ವ್ಯಾಪಾರದಿಂದ ಬಂದ ಆದಾಯದಲ್ಲಿ ಖರೀದಿ ಮಾಡಿದ್ದೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

21. ಗುಡುಮಾಬಿ ಇವರು ತಮ್ಮ ಜೀವಿತ ಕಾಲದಲ್ಲಿ ಗಾಂಧಿ ಮೈದಾನದಲ್ಲಿ ಅಕ್ಕಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿಯು ಸಹ ತಮ್ಮ ಶಿಕ್ಷಕಣದ ಖರ್ಚಿಗಾಗಿ ಅವರ ಅಜ್ಜಿ ಗುಡುಮಾಬಿ ಇವರ ಜೊತೆ ಕುಡಿ ವ್ಯಾಪಾರ ಮಾಡುತಿದ್ದರು ಎಂದರೆ ಸರಿಯಲ್ಲ. ಸದರಿ ವ್ಯಾಪಾರದಿಂದ ಬಂದ ಆದಾಯದಿಂದ ವಾದಿ ತಮ್ಮ ವಿದ್ಯಾಭ್ಯಾಸ ಮಾಡಿದ್ದಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ, ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ